

ಕಲ್ಲಂಗಡಿ ಮಾರಾಟ



ಮಶಾದ್‌ನಲ್ಲಿನ ನೀರುಣಿಸುವ ವೃದ್ಧನ ಪ್ರತಿಮೆ ಎದುರು ಲೇಖಕರು



ಫಲಾಹಾರದ ಊಟ

ತಯಾರಿಕೆಯಲ್ಲಿ ಒದಗುವ ಕೇಸರಿ. ಕೇಸರಿಯು ಹಿಮಾವೃತ ಪ್ರದೇಶದಲ್ಲೇ ಬರುವ ಬೆಳೆ. ಇರಾನಿನ ಮಶಾದ್‌ನಲ್ಲಿ ಕೇಸರಿ ಪರಾಗದ ಅಂಗಡಿಗಳು ಚಿನ್ನಬೆಳ್ಳಿ ಅಂಗಡಿಗಳಂತೆ ಝಗಝಗಿಸುತ್ತಿದ್ದವು.

ಮರುಭೂಮಿಯ ಹೂವು–ಹಣ್ಣಿನ ತೋಟಗಳು ಜೇನುತುಪ್ಪ ಉತ್ಪಾದನೆಗೂ ಕಾರಣವಾಗಿದ್ದವು. ಹಣ್ಣಿನಂಗಡಿಗಳಲ್ಲಿ ಜೇನುತುಂಬಿದ ಸೀಸೆಗಳನ್ನು ನೋಡಬಹುದಿತ್ತು. ಹೋಟೆಲುಗಳಲ್ಲಿ ಬೆಳಗಿನ ತಿಂಡಿಗೆ ಬ್ರೆಡ್ ಜತೆ ಸೇವಿಸಲು ಜೇನುತುಪ್ಪ ಕೊಡುತ್ತಿದ್ದರು. ನಾವಿಳಿದುಕೊಂಡಿದ್ದ ಇರಾನಿನ ಬಸ್ತಾಮಿನ ಹೋಟೆಲಿನಲ್ಲಿ ಜೇನುತುಪ್ಪವನ್ನು ದೊಡ್ಡ ಬಟ್ಟಲಲ್ಲಿ ಪಾಯಸದಂತೆ ಮೇಜಿನ ಮೇಲೆ ಇಟ್ಟಿದ್ದರು. ಜೆರುಸಲೇಮಿನ ದ್ರಾಕ್ಷಾರಸ ಮತ್ತು ಜೇನುಗಳಂತೂ ಉತ್ಕೃಷ್ಟ. ಇಸ್ರೇಲ್–ಪ್ಯಾಲಸ್ತೀನ್ ದೇಶದ ಜೇನ್ನೊಣಗಳು ಮಕರಂದ ಹುಡುಕಿ ಲೆಬೆನಾನ್ ಸಿರಿಯಾದ ಬೆಟ್ಟಗಳಲ್ಲಿರುವ ಹೂಗಳಿಗೆ ಯಾನ ಮಾಡುತ್ತವೆಯಂತೆ. ಹಂಚಿಕೊಂಡು ಬದುಕಲಾರದೆ ರಕ್ತಪಾತಕ ಯುದ್ಧಗಳಲ್ಲಿ ತೊಡಗಿರುವ ದೇಶಗಳಿಗೆ ಈ ದುಂಬಿಗಳು ಯಾವ ಸಂದೇಶ ಕೊಡುತ್ತಿವೆ? ದ್ರಾಕ್ಷಾರಸದ ಸೇವನೆ ಕ್ರೈಸ್ತರ ಪವಿತ್ರ ಆಚರಣೆಗಳಲ್ಲಿ ಒಂದು. ಇದನ್ನು ಜೆರುಸಲೇಮಿನ ಕ್ರೈಸ್ತಯಾತ್ರಿಕರು ಬಾಟಲಿಗಟ್ಟಲೆ ಕೊಂಡು ಮನೆಗೆ ಒಯ್ಯುವರು.

ಮರುಭೂಮಿ ದೇಶಗಳ ಹೂವುಹಣ್ಣುಗಳು, ಅಲ್ಲಿನ ಶಿಲ್ಪ–ಚಿತ್ರ ರತ್ನಗಂಬಳಿ ಕಲೆಗಳಲ್ಲೂ ಪ್ರತಿಫಲಿಸಿವೆ. ಇರಾನಿನ ರತ್ನಗಂಬಳಿಗಳಲ್ಲಿ ಹೂದೋಟದ ಸನ್ನಿವೇಶಗಳು ಸಾಮಾನ್ಯವಾಗಿ ಚಿತ್ರಿತವಾಗಿವೆ. ಅಲ್ಲಿ ಹಲವು ಬಗೆಯ ಹಕ್ಕಿಗಳು ಫಲಭರಿತ ಮರದಲ್ಲಿ ಕೂತು ತಿನ್ನುವ ದೃಶ್ಯಗಳಿವೆ. ವನವಿಹಾರಕ್ಕೆ ಹೋದ ಕುಟುಂಬವು ಬಗೆಬಗೆಯ ಆಹಾರ ಹಣ್ಣು ಇರಿಸಿಕೊಂಡು ಹೊಳೆಬದಿ ಕೂತಿರುವ ಸನ್ನಿವೇಶವೂ ಇದೆ. ಅವರು ತಿನ್ನುತ್ತಿರುವ ಕಲ್ಲಂಗಡಿ ಹೋಳಿನಲ್ಲಿ ಹಣ್ಣಿನ ಹಸಿರುಸಿಪ್ಪೆ, ಕೆಂದಿರುಳು, ಅದರೊಳಗೆ ಇಣುಕುವ ಕಪ್ಪುಬೀಜ ಎಲ್ಲವೂ ಚಿತ್ರಿತವಾಗಿವೆ. ಕರ್ಬಲಾ ಶಹರದಲ್ಲಿ ಹಜರತ್ ಹುಸೇನರ ದರ್ಗಾದ ಮೇಲೆ ಅಳವಡಿಸಿದ ಚಿನ್ನದ ರಸಲೇಪಿತ ಲೋಹದಾವರಣದ ಮೇಲೆ ದ್ರಾಕ್ಷಿ ಗೊಂಚಲು, ಕಿತ್ತಲೆಯ ಗೊಂಚಲುಗಳನ್ನು ಕೆತ್ತಿರುವುದನ್ನು ಗಮನಿಸಿದೆ. ಇಷ್ಟೊಂದು ಬಗೆಯ ಹಣ್ಣು ಬೆಳೆವ ಮರುಭೂಮಿ ದೇಶಗಳಲ್ಲಿ, ಈಗೀಗ ಹಣ್ಣಿನ ರಸಕ್ಕಿಂತ ಅಮೆರಿಕದ ತಂಪು ಪಾನೀಯಗಳು ಜನಪ್ರಿಯವಾಗಿರುವುದು ಮಾತ್ರ ಅರ್ಥವಾಗಲಿಲ್ಲ. ಇದು ಮುಂದಿನ ದಿನಗಳಲ್ಲಿ ಇಲ್ಲಿನವರ ಆರೋಗ್ಯವನ್ನು ಹೇಗೆ ಕೆಡಿಸುವುದೊ ತಿಳಿಯದು.

ಬಿರುಬಿಸಿಲಿನ ಮರುಭೂಮಿ ನಾಡುಗಳಲ್ಲಿ ನೆಲೆಸಿರುವ ಈ ಫಲಸಮೃದ್ಧಿಯು ಹಿಮಾಲಯದ ಹೂವಿನ ಕಣಿವೆಯನ್ನು ನೆನಪಿಸುತ್ತದೆ. ಅಲ್ಲಿನ ಪ್ರಾಣಘಾತಕವಾದ ರೂಕ್ಷ ಹವಾಮಾನದಲ್ಲಿ ಎಷ್ಟೊಂದು ಕೋಮಲವಾದ ಹೂವು ಅರಳುತ್ತವೆ? ಬಹುಶಃ ಎಲ್ಲ ಹೂವು–ಹಣ್ಣುಗಳು ಬಿಸಿಲಲ್ಲಿ ಸುಡಲು, ಚಳಿಯಲ್ಲಿ ನಡುಗಲು, ಹಿಮಪಾತದಲ್ಲಿ ಸಾಯದೆ ಬದುಕಲು ಸಿದ್ಧವಾಗಿಯೇ ಮೈತಳೆಯುತ್ತವೆ– ಪ್ರಕೃತಿ ವಿಪರೀತವಾಗಿ ವರ್ತಿಸುವ ಪ್ರದೇಶದಲ್ಲಿ ಕೂಡ ಕಸುವಿದ್ದರೆ ಬದುಕಬಹುದು ಎಂದು ಜನರಿಗೆ ಪಾಠ ಹೇಳುವಂತೆ, ಭರವಸೆ ನೀಡುವಂತೆ.

ಪ್ರತಿಕ್ರಿಯಿಸಿ: **feedback@sudha.co.in**

